: ಆಗುವ ಅನಾಹುತ ತಪ್ಪಿಸಬೇಕೆಂದರೆ ಮುಂಜಾಗ್ರತೆ ಕ್ರಮವನ್ನು ತಾವು ತೆಗೆದುಕೊಳ್ಳಿ. ಫೋಮ್ ಅಂಡ್ ಕೆಮಿಕಲ್ ಮಿಕ್ಚರ್ ಅಗ್ನಿ ಶಾಮಕ ಠಾಣೆಯಲ್ಲಿ ಸ್ಟಾಕ್ ಇಲ್ಲ ಅಂದರೆ ದಯವಿಟ್ಟು ಅದನ್ನು ತರಿಸಿ ಇಡಿ. ಇಂಥ ಅನಾಹುತಗಳಾದಾಗ ಅಂಥ ಬೆಂಕಿಯನ್ನು ಅರಿಸಲಿಕ್ಕೆ ಕೆಮಿಕಲ್ ಮಿಕ್ಚರ್ ಇಲ್ಲಾಂದ್ರೆ ಕಷ್ಟವಾಗುತ್ತದೆ. ಇದನ್ನು ಒದಗಿಸಿ ಎಂದು ನಾನು ತಮ್ಮ ಮುಖೇನ ಸರಕಾರದಲ್ಲಿ ಮನವಿ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದು ನಿಜವಾಗಲೂ ಕೊರತೆ ಇದೆ ಎನ್ನುತಕ್ಕಂಥ ಮಾಹಿತಿ ನನ್ನ ಹತ್ತಿರ ಇಲ್ಲ. ಆದರೆ, ಮಾನ್ಯ ನರೇಂದ್ರ ಬಾಬುರವರು ಹೇಳಿದ ಮೇಲೆ, ಖಂಡಿತವಾಗಿ ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಕೊರತೆಯನ್ನು ತುಂಬಿಸುವ ಕೆಲಸ ಮಾಡಬೇಕೆಂದು ಆದೇಶವನ್ನು ನಾನು ಕೊಡುತ್ತೇನೆ. ಇದರ ಜೊತೆಗೆ ಅದಕ್ಕೆ ಸಂಬಂಧಪಟ್ಟ ಕಾಂಪೌಂಡ್ ಪಕ್ಕದಲ್ಲಿನ ಮನೆಗಳಿಗೆ ಏನು ತೊಂದರೆಯಾಗಿದೆ ಹಾಗೂ ಅವರಿಗೇನು ಲುಕ್ಸಾನ್ ಆಗಿದೆ, ಅದರ ಬಗ್ಗೆ ಪರಿಹಾರವನ್ನು ಕೂಡ ಸಂಬಂಧಪಟ್ಟವರು ಕೊಡಬೇಕೆಂದು ನಮ್ಮ ಅಧಿಕಾರಿಗಳಿಗೆ ಹೇಳಿ ಅದನ್ನು ಕೂಡ ಕೊಡಿಸ ತಕ್ಕಂಥ ವ್ಯವಸ್ಥೆ ಮಾಡುತ್ತೇನೆ. ಮೂರನೇಯದಾಗಿ ಅಲ್ಲಿ ಬೋರ್‌ವೆಲ್ ಹಾಕಿಸಬೇಕೆಂದು ಏನು ಹೇಳಿದ್ದಾರೆ. ಖಂಡಿತವಾಗಿ ಫೈರ್ ಫೋರ್ಸ್ ಡಿಪಾರ್ಟ್‌ಮೆಂಟ್‌ಗೆ ಹೇಳಿ ಅವರ ಅಗ್ನಿ ಶಾಮಕ ಠಾಣೆ ಎಲ್ಲಿದೆ ಅಲ್ಲಿ ಒಂದು ಬೋರ್‌ವೆಲ್ ಕೊರೆಸುವುದಕ್ಕೆ ಪ್ರಯತ್ನಿಸಲಾಗುವುದು, ನೀರು ಬಂದರೆ ಪರವಾಗಿಲ್ಲ, ನೀರು ಬಾರದೇ ಇದ್ದರೆ ಕಷ್ಟವಾಗುತ್ತದೆ. ಜೊತೆಗೆ ಆ ಹಣವೂ ವೇಷ್ಟ್ ಆಗುತ್ತದೆ, ಅದನ್ನು ಸಂಬಂಧಪಟ್ಟವರಿಗೆ ಹೇಳಿ ಆ ಬೋರ್‌ವೆಲ್ ತೆಗಿಸಿಕೊಡುವಂಥ ವ್ಯವಸ್ಥೆ ಮಾಡುತ್ತೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆ ಮುಗಿಯಿತು, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು..

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 29–3–05 ರ 19 ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 156 ಪ್ರಶ್ನೆಗಳ ಪೈಕಿ 110 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಟಿ. ರಾಜಣ್ಣ, (ಕಾರ್ಯದರ್ಶಿ ವಿಧಾನ ಸಭೆ) : ಮಾನ್ಯ ಅಧ್ಯಕ್ಷರೆ, ವಿಧಾನ